Serial No. 10 and 11

ಕರ್ನಾಟಕ ಸರ್ಕಾರ

(ಸಾರ್ವಜನಿಕ ಶಿಕ್ಷಣ ಇಲಾಖೆ)

**ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಛೇರಿ ಮಂಗಳೂರು ದಕ್ಷಿಣ ವಲಯ, ಬೋಳಾರ ಮಂಗಳೂರು.**

ಕ್ರ.ಸಂ: ಬಿ1/ಪ್ರ.ಮಾ.ಅ.ರಹಿತ/02/2013-14

ದಿನಾಂಕ: 26/10/2013.

ಜ್ಞಾಪನ

ವಿಷಯ : ಅನುದಾನ ರಹಿತ ಕುನಿಲ್ ಇಲ್ಮ್ ಕಿ.ಪ್ರಾ.ಶಾಲೆ, ನಾಟೇಕಲ್, ಮಂಜನಾಡಿ, ಮಂಗಳೂರು ದಕ್ಷಿಣ ವಲಯ ಈ ಶಾಲೆಯ 1 ರಿಂದ 5 ನೇ ತರಗತಿಗೆ ಪ್ರಥಮ ಮಾನ್ಯತೆ ಆದೇಶ ಕುರಿತು.

ಉಲ್ಲೇಖ: 1. ಶಿಕ್ಷಣ ಸಂಯೋಜಕರ ಭೇಟಿ ವರದಿ ದಿನಾಂಕ: 11/07/2013.
2. ಸದರಿ ಶಾಲಾ ಸಂಚಾಲಕರ ಪ್ರಸ್ತಾವನೆ ದಿನಾಂಕ: 11/06/2013.
3. ಉ.ನಿ (ಆ) ಸಾ.ಶಿ.ಇಲಾಖೆ ಮಂಗಳೂರು ಇವರ ಪತ್ರ ಸಂಖ್ಯೆ : ಡಿ4/26334/ಹೊಸ.ಕಿ.ಪ್ರಾ.ಶಾಲೆ/ಅನುಮತಿ/2012-13 ದಿ: 17/05/2013

***********

ಆದೇಶ:-

ಅನುದಾನ ರಹಿತ ಕುನಿಲ್ ಇಲ್ಮ್ ಕಿ.ಪ್ರಾ.ಶಾಲೆ, ನಾಟೇಕಲ್, ಮಂಜನಾಡಿ, ಮಂಗಳೂರು ದಕ್ಷಿಣ ವಲಯ. ಈ ಶಾಲೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು 2013-14 ನೇ ಸಾಲಿಗೆ 1 ರಿಂದ 5ನೇ ತರಗತಿಗೆ ಪ್ರಥಮ ಮಾನ್ಯತೆ ನೀಡಿ ಆದೇಶಿಸಿದೆ.

1. ಶಿಕ್ಷಣ ಸಂಸ್ಥೆಯ ಹೆಸರು : ಕುನಿಲ್ ಇಲ್ಮ್ ಅಕಾಡೆಮಿ ನಾಟೇಕಲ್, ಮಂಜನಾಡಿ, ಮಂಗಳೂರು (ತಾ) ದಕ್ಷಿಣ ಕನ್ನಡ ಜಿಲ್ಲೆ.
2. ಶಾಲೆಯ ಹೆಸರು ಮತ್ತು ವಿಳಾಸ: ಅನುದಾನ ರಹಿತ ಕುನಿಲ್ ಇಲ್ಮ್ ಕಿ.ಪ್ರಾ.ಶಾಲೆ, ನಾಟೇಕಲ್, ಮಂಗಳೂರು (ತಾ) ದಕ್ಷಿಣ ಕನ್ನಡ ಜಿಲ್ಲೆ.
3. ನೊಂದಣಿ ಪ್ರಾಧಿಕಾರ : ಉಪನಿರ್ದೇಶಕರು (ಆ), ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಗಳೂರು, ದ.ಕ
4. ಶಾಲಾ ನೋಂದಣಿ ಸಂಖ್ಯೆ : 09/2013-14.

| ತರಗತಿಗಳು | ವಿಭಾಗಗಳು | ಮಾಧ್ಯಮ | ತಾತ್ಕಾಲಿಕ ಮಾನ್ಯತೆ ನವೀಕರಿಸಿದ ಅವಧಿ |
| --- | --- | --- | --- |
| 1 ರಿಂದ 5ನೇ ತರಗತಿ | ತಲಾ 01 ವಿಭಾಗ | ಕನ್ನಡ ಮಾಧ್ಯಮ ಶಾಶ್ವತ ಅನುದಾನ ರಹಿತ | 2013-14 ನೇ ಸಾಲಿಗೆ ಶಾಶ್ವತ ಅನುದಾನ ರಹಿತವಾಗಿ 1 ರಿಂದ 5ನೇ ತರಗತಿಗೆ ಪ್ರಥಮ ಮಾನ್ಯತೆ ನೀಡಿ ಆದೇಶಿಸಿದೆ. |

ಷರತ್ತುಗಳು:-

1. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಮಸೂದೆ ನಂ.1 ರ 1995) ರ ರೀತ್ಯಾ ಶಾಲೆಯು ಇಲಾಖೆಯಲ್ಲಿ ನೋಂದಣಿಯಾಗಿರತಕ್ಕದ್ದು.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಾನ್ಯತೆ) ನಿಯಮ 1999 ಉಪನಿಯಮ 4 ರಲ್ಲಿ ವಿಧಿಸಿದ ಷರತ್ತುಗಳನ್ನು ಪೂರೈಸತಕ್ಕದ್ದು.

3. ಕರ್ನಾಟಕ ಶಿಕ್ಷಣ ಅಧಿನಿಯಮ 1983 ರ ಅಧ್ಯಾಯ 7 ರಲ್ಲಿ ನಿಗದಿಪಡಿಸಿದಂತೆ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪಕ ಸಮಿತಿಯನ್ನು ರಚಿಸಬೇಕು, ಪ್ರತಿ ಎರಡು ವರ್ಷಗಳಿಗೊಮ್ಮೆ ವ್ಯವಸ್ಥಾಪಕ ಸಮಿತಿಯನ್ನು ಪುನಾರಚಿಸಿ ಇಲಾಖೆಯಿಂದ ಅನುಮೋದನೆ ಪಡೆದುಕೊಳ್ಳುವುದು.
4. ಇಲಾಖೆಯಿಂದ ಯಾವುದೇ ಅನುದಾನ ನೆರವು ನೀಡುವುದಿಲ್ಲ.
5. ಶಾಲೆಯ ಹಣಕಾಸಿನ ಲೆಕ್ಕ ಪತ್ರವನ್ನು ಇಲಾಖೆಯಿಂದ ತಪಾಸಣೆ ಮಾಡಿಸತಕ್ಕದ್ದು.
6. ತರಬೇತಾದ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು.
7. ಸರಕಾರ ನಿಗದಿಪಡಿಸಿದ ಶುಲ್ಕಗಳನ್ನು ಮಾತ್ರ ವಿದ್ಯಾರ್ಥಿಗಳಿಂದ ವಸೂಲು ಮಾಡತಕ್ಕದ್ದು.
8. ಸರಕಾರ ನಿಗದಿಪಡಿಸಿದ ಪಠ್ಯಕ್ರಮಗಳನ್ನು ಮಾತ್ರ ಶಾಲೆಯಲ್ಲಿ ಅಳವಡಿಸತಕ್ಕದ್ದು.
9. ಶಾಲೆಗೆ ಸಾಕಷ್ಟು ಪೀಠೋಪಕರಣ ಒದಗಿಸತಕ್ಕದ್ದು.
10. ಶಾಲೆಯಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
11. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳನ್ನು ಪಾಲಿಸುವುದು.
12. ದಾಖಲಾತಿ/ಹಾಜರಾತಿ ಸಂಖ್ಯೆ ಕಡ್ಡಾಯವಾಗಿ 25 ಕ್ಕಿಂತ ಹೆಚ್ಚಿರುವಂತೆ ನೋಡಿಕೊಳ್ಳುವುದು.
13. ಪ್ರತೀ ತರಗತಿ ಕೊಠಡಿಗಳಲ್ಲಿ ಕಡ್ಡಾಯವಾಗಿ ಬೆಂಕಿ ನಂದಕವನ್ನು ಅಳವಡಿಸುವುದು.
14. ಶಾಲಾ ಆವರಣದಿಂದ 100 ಅಡಿ ಅಂತರದಲ್ಲಿ ತಂಬಾಕುಯುಕ್ತ ವಸ್ತುಗಳ ಮಾರಾಟ ನಿಷೇಧಿಸಿದೆ ಎಂದು ಶಾಲಾ ಆವರಣದಲ್ಲಿ ಫಲಕವನ್ನು ಅಳವಡಿಸುವುದು.
15. ಪ್ರತೀ ವರ್ಷವು ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
16. ಸರಕಾರಿ ಅಧಿಸೂಚನೆ ದಿ: 12.01.2006 ರಲ್ಲಿ ತಿಳಿಸಿರುವಂತೆ ನೌಕರರಿಗೆ ಸೇವಾಭದ್ರತೆ ನೀಡುವ ಷರತ್ತಿಗೊಳಪಟ್ಟಿರುತ್ತದೆ.
17. ಸದ್ರಿ ಶಾಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸಂಬಂಧಿಸಿದಂತೆ ಪ್ರತಿಯೊಬ್ಬರ ಸೇವಾ ಪುಸ್ತಕ ನಿರ್ವಹಿಸುತ್ತಿರುವ ಬಗ್ಗೆ ಹಾಗೂ ಬ್ಯಾಂಕ್ ಮೂಲಕ ಕನಿಷ್ಠ ವೇತನ ಪಾವತಿಸುತ್ತಿರುವ ಬಗ್ಗೆ ವರದಿ ಸಲ್ಲಿಸುವುದು.
18. ಸರಕಾರ/ಇಲಾಖೆ ಕಾಲಕಾಲಕ್ಕೆ ನೀಡುವ ಸುತ್ತೋಲೆ ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
19. ಎಲ್ಲಾ ಷರತ್ತುಗಳನ್ನು ಪಾಲಿಸಿ ಕ್ಲಪ್ತ ಸಮಯದೊಳಗೆ ಮಾನ್ಯತೆ ನವೀಕರಣಕ್ಕಾಗಿ ಪ್ರಸ್ತಾವನೆ ಸಲ್ಲಿಸುವುದು.
20. ಮಾನ್ಯತೆಯಲ್ಲಿನ ಷರತ್ತುಗಳ ಪಾಲನೆಯಾಗದಿದ್ದಲ್ಲಿ ಶಾಲೆಗೆ ನೀಡಿರುವ ಅನುಮತಿಯನ್ನು ಮತ್ತು ಮಾನ್ಯತೆಯನ್ನು ರದ್ದುಪಡಿಸುವ ಅಧಿಕಾರ ಇಲಾಖೆ ಕಾಯ್ದಿರಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಮಂಗಳೂರು ದಕ್ಷಿಣ ವಲಯ.

ರಿಗೆ.

ಸಂಚಾಲಕರು.
ಅನುದಾನ ರಹಿತ ಕೂನಿಲ್ ಇಲ್ಮ್ ಕಿ.ಪ್ರಾ.ಶಾಲೆ. ನಾಟೇಕಲ್.
ಮಂಗಳೂರು ದಕ್ಷಿಣ ವಲಯ.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ7(6)ಪ್ರಾಶಿಅ:ಹೊ.ಶಾ.ನೋಂ/1192013-14 ದಿನಾಂಕ: 26.03.2014

## ನಮೂನೆ-2

### (ನಿಯಮ 3 ಉಪನಿಯಮ 5 (ಬಿ)

### ಪ್ರಮಾಣ ಪತ್ರ ಸಂಖ್ಯೆ : 69/2014-15

ಕುವಿಲ್ ಇಲ್ಮ್ ಅಕಾಡೆಮಿ, ನಾಟೇಕಲ್, ಮಂಜನಾಡಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡಜಿಲ್ಲೆ ಇವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆ್ಯಕ್ಟ್ 1995) ಸೆಕ್ಷನ್ 31 ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಪಿ ಜಿ ಸಿ 2002, ದಿನಾಂಕ: 11.11.2002 ರ ಪ್ರಕಾರ ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ 69 ಪುಟ ಸಂಖ್ಯೆ:175 ಸಂಪುಟ ಸಂಖ್ಯೆ:17 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | | | |
|---|---|---|---|---|
| 1 | ಕ್ರಮ ಸಂಖ್ಯೆ | 69/2014-2015 | | |
| 2 | ಶಾಲೆಯ ಹೆಸರು ಮತ್ತು ವಿಳಾಸ | ಕುವಿಲ್ ಇಲ್ಮ್ ಸ್ಕೂಲ್, ನಾಟೇಕಲ್, ಮಂಜನಾಡಿ, ಮಂಗಳೂರು ದಕ್ಷಿಣ ವಲಯ, ದಕ್ಷಿಣ ಕನ್ನಡ ಜಿಲ್ಲೆ | | |
| 3 | ಅನುಮತಿ ನೀಡಿದ ತರಗತಿ | 6 ನೇ ತರಗತಿ | 7 ನೇ ತರಗತಿ ಮತ್ತು | 8ನೇ ತರಗತಿ |
| 4 | ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | 2014-2015 | 2015-2016 | 2016-2017 |
| | | [Permanently without-aid] | | |
| 5 | ಅನುಮತಿ ನೀಡಿದ ಮಾಧ್ಯಮ | ಆಂಗ್ಲ ಮಾಧ್ಯಮ | | |
| 6 | ಶುಲ್ಕ ಪಾವತಿ ಮಾಡಿರುವುದು | ರೂ. 10,000/- | | |

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ ನೋಂದಣಿ/ ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. ಈ ನೋಂದಣಿ/ಮಾನ್ಯತೆಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ,ವರ್ಗೀಕರಣ]ನಿಯಮ-1997 ನಿಯಮ-3 [5] [ಬಿ] ರಲ್ಲಿ ತಿಳಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ಇತ್ಯಾದಿ) ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8 ರನ್ವಯ ಸುರಕ್ಷತಾ ಕ್ರಮವಾಗಿ, ಶಾಲಾ ಕಟ್ಟಡವು ಕಡ್ಡಾಯವಾಗಿ ಉತ್ತಮ ಗುಣಮಟ್ಟದ ಮೇಲ್ಛಾವಣಿಯನ್ನು ಹೊಂದಿದ್ದು, ಉತ್ತಮ ಗಾಳಿ ಬೆಳಕಿನ ವ್ಯವಸ್ಥೆ ಹೊಂದಿರಬೇಕು. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಕುಡಿಯುವ ನೀರನ್ನು ಒದಗಿಸಬೇಕು. ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ, ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು. ಮತ್ತು ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.
3. ಆಡಳಿತ ಮಂಡಳಿಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
4. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್-41[5] ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ನಡೆಸತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಮತ್ತು ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 [ಕರ್ನಾಟಕ ಆ್ಯಕ್ಟ್ ಸಂಖ್ಯೆ:1:95]ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚನೆಯಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
7. ಈ ಪ್ರಾಥಮಿಕ ಶಾಲಾ ನೋಂದಾವಣೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 175 ಪಿ.ಎಂ.ಸಿ 95, ದಿನಾಂಕ : 07-09-98 ಮತ್ತು ದಿನಾಂಕ : 19-12-98 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ. [ಅನುದಾನಕ್ಕೆ ಒಳಪಡುವುದಿಲ್ಲ]
8. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ [ಶಿಸ್ತು ಮತ್ತು ನಿಯಂತ್ರಣ] ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು/ ಅವುಗಳಿಗೆ ಬದ್ಧರಾಗಿರತಕ್ಕದ್ದು.
9. ಕರ್ನಾಟಕ ಶಿಕ್ಷಣ ಸಂಸ್ಥೆಗಳ(ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ವಸ್ತುನಿಗಧೀಕರಣ ಇತ್ಯಾದಿ) ನಿಯಮಾವಳಿ 1995ರನ್ವಯ ಇಲಾಖೆ ಮತ್ತು ಸರ್ಕಾರ ನಿಗದಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಬೋಧಿಸತಕ್ಕದ್ದು ಹಾಗೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹೊರೆಯಾಗದಂತೆ ಕ್ರಮವಹಿಸುವುದು.

10. ಕರ್ನಾಟಕ ಶಿಕ್ಷಣ ಸಂಸ್ಥೆಗಳ(ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ವಸ್ತುನಿಗದೀಕರಣ ಇತ್ಯಾದಿ) ನಿಯಮಾವಳಿ 1995. ದಿನಾಂಕ:04-10-95ರ ನಿಯಮ-10ರಂತೆ ಟರ್ಮ್ ಶುಲ್ಕ, ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡತಕ್ಕದ್ದು ಹಾಗೂ ನಿಯಮ 10(04)ರಂತೆ ಶಾಲೆಯಲ್ಲಿ ವಿದ್ಯಾರ್ಥಿ/ಪೋಷಕರಿಂದ ವಸೂಲಿ ಮಾಡುವ ಶುಲ್ಕಗಳ ವಿವರಗಳ ಒಂದು ಪ್ರೊಫೈಲ್ ಅನ್ನು ಶಾಲೆಯ ಸೂಚನಾಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಿ, ಅದರ ಒಂದು ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ/ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

11. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ39. ವಿವಿಧ-99. ದಿನಾಂಕ:14-03-2000ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ರೆಗ್ಯುಲೇಷನ್ ಆಫ್ ಸರ್ಟಿಫಿಕೇಟ್ ಫೀಸ್ ಅಂಡ್ ಡೊನೇಷನ್ಸ್) ನಿಯಮ-1999ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ನಿಯಮದಂತೆ ಯಾವುದೇ ವಂತಿಗೆಯನ್ನು ವಸೂಲು ಮಾಡುವಂತಿಲ್ಲ.

12. ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಆಕ್ಟ್ 1 ಆಫ್ 1995) ಪ್ರಕಾರ ಸೆಕ್ಷನ್ 36 ರಿಂದ 39 ರ ರೀತ್ಯಾ ಹಾಗೂ ಇಡಿ 131 ವಿವಿಧ 98, ಬೆಂಗಳೂರು, ದಿನಾಂಕ : 04-11-99 ರಂತೆ ಮಾನ್ಯತೆ ನವೀಕರಣ ಪಡೆಯಲು ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 137 ವಿವಿಧ 98, ಬೆಂಗಳೂರು, ದಿನಾಂಕ : 19-05-99 ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ನಿಗದಿತ ಭದ್ರತಾ ಠೇವಣಿಯನ್ನು ಜಿಲ್ಲಾ ಉಪ ನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

13. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.52ವಿವಿಧ.99 ದಿನಾಂಕ:-02-02-2000ರ ಆರ್ಟಿಕಲ್-30 ನಿಯಮದಂತೆ ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು.

14. **6ನೇ ತರಗತಿಯಿಂದ 8ನೇ ತರಗತಿಗೆ ಬಿಇಡಿ ತರಬೇತಿ ಹೊಂದಿದ ಶಿಕ್ಷಕರನ್ನು ನೇಮಿಸಿಕೊಳ್ಳತಕ್ಕದ್ದು.**

15. ಕರ್ನಾಟಕ ಶಿಕ್ಷಣ ಮಸೂದೆಯ ನಿಯಮಗಳಂತೆ ಶಾಲೆಗೆ ಒದಗಿಸಬೇಕಾದ ಮೂಲಭೂತ ಸೌಕರ್ಯಗಳಾದ ಪೀಠೋಪಕರಣ, ಪ್ರಯೋಗಾಲಯ, ಗ್ರಂಥಾಲಯ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದ ಒಳಗಾಗಿ ಹಾಗೂ ಆಟದ ಮೈದಾನ ಮತ್ತು ಶಾಲಾ ಕಟ್ಟಡವನ್ನು ಮೂರು ವರ್ಷದೊಳಗಾಗಿ ಒದಗಿಸಿಕೊಳ್ಳತಕ್ಕದ್ದು.

16. ಶಾಲಾ ಕೆಲಸದ ಅವಧಿ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

17. ಶಾಲೆಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಒಂದು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.

18. ಈಗಾಗಲೇ 1 ರಿಂದ 7ನೇ ತರಗತಿ ಕನ್ನಡ ಮಾಧ್ಯಮ ಇದ್ದಲ್ಲಿ, ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಮಂಜೂರಾತಿಯಿಂದ ಕನ್ನಡ ಮಾಧ್ಯಮದ ತರಗತಿಗಳಿಗೆ ಯಾವುದೇ ರೀತಿ ಧಕ್ಕೆ ಬಾರದಂತೆ ನೋಡಿಕೊಳ್ಳುವುದು.

19. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 27 ಎಸ್‌ಇಪಿ 03 ದಿನಾಂಕ:-13-02-2003 ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ, ಶಾಲೆಯಲ್ಲಿ ನೇಮಕಗೊಂಡಿರುವ ಶಿಕ್ಷಕರ/ಸಿಬ್ಬಂದಿ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲು ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು.

20. ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ತಪ್ಪದೇ ನಿಯೋಜಿಸುವುದು.

21. ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲೆಗಳು ಸುಳ್ಳು ದಾಖಲೆಗಳೆಂದು ಕಂಡು ಬಂದಲ್ಲಿ ಈ ನೋಂದಣಿಯನ್ನು ರದ್ದುಪಡಿಸಲಾಗುವುದು.

22. ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 50 ಕ್ಕೆ ಮೀರಬಾರದು.

23. ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

24. ಸರ್ಕಾರದ ಪತ್ರದ ಸಂಖ್ಯೆ:ಇಡಿ122:ಎಸ್.ಇ.ಎಸ್.2007 ಬೆಂಗಳೂರು ದಿನಾಂಕ:17.05.2007 ರ ಪತ್ರದಲ್ಲಿನ ಷರತ್ತುಗಳನ್ನು ಪಾಲಿಸುವುದು.

25. 1 ರಿಂದ 5 ನೇ ತರಗತಿವರೆಗೆ ಯಾವ ಮಾಧ್ಯಮದಲ್ಲಿ ನೋಂದಣಿ ನೀಡಲಾಗಿದೆಯೋ ಅದೇ ಮಾಧ್ಯಮದಲ್ಲಿ ಶಾಲೆಯನ್ನು ನಡೆಸತಕ್ಕದ್ದು.

[ಮೊಹಮ್ಮದ್ ಮೊಹಸಿನ್]
ಆಯುಕ್ತರು ಹಾಗೂ ನೋಂದಣಿ ಅಧಿಕಾರಿಗಳು.

ಪ್ರತಿಯನ್ನು:

1. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ ರವರಿಗೆ,
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಗಳೂರು ದಕ್ಷಿಣ ರವರಿಗೆ,
3. ಕಾರ್ಯದರ್ಶಿಗಳು, ಕುನಿಲ್ ಇಲ್ಮ್ ಅಕಾಡೆಮಿ, ನಾಟೇಕಲ್, ಮಂಜನಾಡಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡಜಿಲ್ಲೆ ರವರಿಗೆ
4. ಕಛೇರಿ ಪ್ರತಿ